## 36. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇಟ್ಟಿಗೆಹಳ್ಳಿ

ತುಂಗಾ ತಾಯಿಯ ದಂಡೆಯ ಮೇಲೆ ಪುಟ್ಟ ಗ್ರಾಮವಾಗಿ ಬೆಳೆದು ಇಂದು ದಿನ ದಿನಕ್ಕೆ ದಿಕ್ಕಲ್ಲಟವಾಗಿ ಬೆಳೆಯುತ್ತಿರುವ ಸುಂದರ ಉದ್ಯಾನ ನಗರಿ ಜ್ಞಾನಾರ್ಜನೆಯ ಕೇಂದ್ರ ಬಿಂದು ಎನಿಸಿಕೊಂಡಿರುವ ಸಿಹಿಮೊಗೆಯ ಶಿವಮೊಗ್ಗ ಜಿಲ್ಲೆಯು ಭಯಂಕರ ಅರಣ್ಯ ಪ್ರದೇಶವನ್ನು ಹೊಂದಿ ಅದರಲದಲಿ ವನ್ಯ ಮೃಗಗಳನ್ನು ತುಂಬಿಸಿಕೊಂಡು ಬೇಟೆಗಾಗಿ ಆಹ್ವಾನಿಸುತ್ತಿದ್ದ ಶಿಕಾರಿಪುರ ತಾಲೂಕು ಆಜ್ಞೇಯ ಭಾಗಕ್ಕೆ ಗುಡ್ಡದಲ್ಲಿ ಹುದುಗಿಕೊಂಡಿರುವ ವನಸಿರಿ ಜಲಸಂಪತ್ತನ್ನು ಹೊಂದಿರುವ ಸುಂದರವಾದ ಪುಟ್ಟ ಗ್ರಾಮವೇ ಇಟ್ಟಿಗೆ ಹಳ್ಳಿ. 21 ನೇ ಶತಮಾನದಲ್ಲಿ ದೇಶ ವೈಜ್ಞಾನಿಕವಾಗಿ ಮುಂದುವರಿದರೂ ಈ ಗ್ರಾಮವು ಸಂಚಾರ ವ್ಯವಸ್ಥೆ ಇಲ್ಲದೆ, ಹಿಂದುಳಿದ ಕುಗ್ರಾಮವಾಗಿದೆ.

**ಭೌಗೋಳಿಕ ಹಿನ್ನೆಲೆ:–** ಈ ಊರಿನ ಪ್ರದೇಶವು ಫಲವತ್ತಾಗಿದ್ದು, ಮಳೆ ಯಥೇಚ್ಛವಾಗಿ ಆಗುತ್ತದೆ. ಗ್ರಾಮದ ಸುತ್ತಲೂ ಎಂಪಿಎಂ ಇಲಾಖೆಯವರು ನೀಲಗಿರಿ ತೋಪುಗಳನ್ನು ಬೆಳೆಸಿದ್ದಾರೆ. ಪಕ್ಕದಲ್ಲಿ ಗುಡ್ಡವಿದೆ. ಹಳ್ಳವು ಬೇಸಿಗೆಯಲ್ಲಿಯೂ ಹರಿಯುತ್ತಿರುತ್ತದೆ. ಸುಮಾರು 75 ಹೆಕ್ಟೇರ್ ಪ್ರದೇಶಕ್ಕೆ ನೀರಾಗುವಷ್ಟು ಭವ್ಯವಾದ ಬಾಲಣ್ಣನ ಕೆರೆಯಿದೆ.

**ಐತಿಹಾಸಿಕ ಹಿನ್ನೆಲೆ :–** ಇಟ್ಟಿಗೆ ಹಳ್ಳಿ ಗ್ರಾಮವು ಐತಿಹಾಸಿಕ ಮತ್ತು ವಿಚಿತ್ರವಾದ ಹಿನ್ನೆಲೆ ಹೊಂದಿದೆ. ಹಿಂದೆ ಇಟ್ಟಿಗೆಹಳ್ಳಿ ಹುಡೇವೂ ಮಟ್ಟಿಯಲ್ಲಿತ್ತು. ಅದರ ಸುತ್ತಲೂ ತಗ್ಗಿಹಳ್ಳಿ, ದಿಗ್ಗಿಹಳ್ಳಿ, ಗುಂಗಾರಗುಟ್ಟಿ, ಜಿಗಳಿಕೆರೆ ಗ್ರಾಮಗಳು ಇದ್ದವು. ಈ ಗ್ರಾಮಗಳಲ್ಲಿ ಅಳಿದು ಉಳಿದ ಕೆಲವು ಸಂಸಾರಗಳು ತಗ್ಗಿಹಳ್ಳಿ ಇರುವ ಸ್ಥಳವನ್ನು ಆಶ್ರಯಿಸಿದರು. ತಮ್ಮ ಸಾಮಾನುಗಳನ್ನು ಅಲ್ಲಿ ಇಟ್ಟೆವು ಇಲ್ಲಿ ಇಟ್ಟೆವು ಎಂಬ ವಾಡಿಕೆಯಂತೆ ಜನರ ಬಾಯಲ್ಲಿ ಇಟ್ಟಿಗೆ ಹಳ್ಳಿ ಎಂದು ಕರೆಯಲ್ಪಟ್ಟಿತು ಎಂದು ಊರಿನ ಹಿರಿಯರು ಹೇಳುತ್ತಾರೆ.

ಈ ಗ್ರಾಮವು ಮೊದಲು ದಟ್ಟವಾದ ಅರಣ್ಯದಿಂದ ಕೂಡಿದ್ದು 4 ಊರುಗಳಿಂದ 9 ಮನೆಗಳಿದ್ದವು. ಇಲ್ಲಿ ನಂತರ ಬೇರೆ ಬೇರೆ ಕಡೆಯಿಂದ ಜನರು ವಲಸೆ ಬಂದು ಇಲ್ಲಿ ನೆಲಸಿದರು. ಹಿಂದೆ ಆಶ್ರಯವಿಲ್ಲದೆ ಬಂದರೂ ಇಲ್ಲಿ ಇಟ್ಟುಕೊಳ್ಳಿ ಎಂದು ಹೇಳುತ್ತಿದ್ದರಂತೆ ಮತ್ತು ಆಶ್ರಯ ಇಲ್ಲದವರಿಗೆ ಜನರು ಈ ಊರಿಗೆ ಕಳುಹಿಸುತ್ತಿದ್ದರಂತೆ. ಅದೇ ಮುಂದುವರೆದು ಇಟ್ಟಿಗೆ ಹಳ್ಳಿ ಎಂದಾಯಿತು ಎಂದೂ ಪ್ರತೀತಿ ಇದೆ.

ಈ ಊರಿನಲ್ಲಿ ಕಲ್ಲಿನಿಂದ ನಿರ್ಮಿಸಿದ ಐತಿಹಾಸಿಕ ಶ್ರೀ ಸಿದ್ದರಾಮೇಶ್ವರ ದೇವಸ್ಥಾನವಿದೆ. ಇಲ್ಲಿ ಮಾಸ್ತಿಕಲ್ಲು ಮತ್ತು ವೀರಗಲ್ಲುಗಳಿವೆ ಹಾಗೂ 2 ಶಿಲಾ ಶಾಸನಗಳೂ ಇವೆ.

**ಶಾಲೆಯ ಹಿನ್ನೆಲೆ :–**ಸುಮಾರು 58 ವರ್ಷಗಳನ್ನು ಪೂರೈಸಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇಟ್ಟಿಗೆಹಳ್ಳಿಯು ಸುಂದರ ಅರೆ ಮಲೆನಾಡು ಪ್ರದೇಶದಲ್ಲಿದ್ದು ಶಿಕಾರಿಪುರದಿಂದ 12 ಕಿ ಮೀ ದೂರದಲ್ಲಿದೆ. ಇಲ್ಲಿ ಸುಮಾರು 162 ಕುಟುಂಬಗಳು ಇದ್ದು 849 ಜನ ವಾಸಿಸುತ್ತಿದ್ದಾರೆ. ಈ ಶಲೆ 1961–62 ರಲ್ಲಿ ಶ್ರೀ ಮಾರಿಕಾಂಬ ದೇವಸ್ಥಾನದಲ್ಲಿ ಶ್ರೀ ಹನುಮಂತಪ್ಪ ಅರಳೀಹಳ್ಳಿ ಮತ್ತು ಪರಮೇಶ್ವರಪ್ಪ ಕಾಗಿನಲ್ಲಿ ಎಂಬ ಶಿಕ್ಷಕರು ಪ್ರಾರಂಭಿಸಿದರು. ಮೊದಲಿಗೆ 1 ರಿಂದ 4 ನೇ ತರಗತಿಯ 20 ರಿಂದ 30 ಮಕ್ಕಳಿಂದ ಪ್ರಾರಂಭವಾದ ಈ ಶಾಲೆ 1994–95 ರಿಂದ ಹಿರಿಯ ಪ್ರಾಥಮಿಕ ಶಾಲೆಯಾಯಿತು. ಈಗ ಸ್ವಂತ ಕಟ್ಟಡ ಹೊಂದಿ 5 ಕೊಠಡಿಗಳನ್ನೂ ಹೊಂದಿದೆ. 47 ಮಕ್ಕಳಿದ್ದು 3 ಜನ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.









2007–08 ನೇ ಸಾಲಿನಲ್ಲಿ 20 ಅಡಿ * 100 ಅಡಿ ಜಾಗವನ್ನು ಶ್ರೀ ಬಸವರಾಜಪ್ಪ ಇವರು ಶಾಲೆಗೆ ದಾನವಾಗಿ ನೀಡಿದರು. ನಂತರ ಶಾಲೆಗೆ ದಾನಿಗಳ ಸಹಾಯದಿಂದ ಗೇಟ್, ಕಾಂಪೌಂಡ್, ಗೋಡೆ ಬರಹಗಳನ್ನು ಮಾಡಿಸಲಾಗಿದೆ. ತಾಲೂಕು ಪಂಚಾಯಿತಿ ವತಿಯಿಂದ ರಂಗಮಂದಿರ ನಿರ್ಮಾಣವಾಗಿದೆ.





















